ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 1, March-April 2024, Pp. 118-122
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಛಲವಾದಿ ಸಮುದಾಯದ ಸಬಲೀಕರಣ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

**ಮಹೇಶ್ವರಿ ಸಿ. ಎಂ[1] ಮತ್ತು ಡಾ. ಚಲುವರಾಜು[2]**
[1]ಸಂಶೋಧನಾ ವಿದ್ಯಾರ್ಥಿ (ಸಮಾಜ ಕಾರ್ಯ), [2]ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**Abstract:**

*ಕರ್ನಾಟಕದಲ್ಲಿ ಸಮುದಾಯದ ಅಧ್ಯಯನಗಳು ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ನಡೆದಿದೆ. ಅನೇಕ ಮಾನವಶಾಸ್ತ್ರಜ್ಞರು ಹಾಗೂ ಬ್ರಿಟಿಷ್ ಅಧಿಕಾರಿಗಳು ಜಾತಿ ಮತ್ತು ಬುಡಕಟ್ಟು ಸಮುದಾಯಗಳನ್ನು ಕುರಿತು ವ್ಯವಸ್ಥಿತವಾಗಿ ಅಧ್ಯಯನ ಮಾಡಿದ್ದಾರೆ. ಅನಂತ ಕೃಷ್ಣ ಅಯ್ಯರ್, ಎಚ್.ವಿ.ನಂಜುಂಡಯ್ಯ, ಎಡ್ಗರ್ ಥರ್ಸ್ಟನ್, ಎ.ಎ.ಡಿ. ಲೂಯಿಸ್ ಹಾಗೂ ಸೆನ್ಸಸ್ ಅಧಿಕಾರಿಗಳು ಸಮುದಾಯಗಳ ಬಗ್ಗೆ ಅಧ್ಯಯನ ಮಾಡಿ ದಾಖಲೀಕರಣ ಮಾಡಿದ್ದಾರೆ. ಬ್ರಿಟಿಷ್‌ರ ಆಡಳಿತದ ಅವಧಿಯಲ್ಲಿ Ethnographic Servey ಕೈಗೊಂಡು ವಿವಿಧ ಜಾತಿ ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ಆರ್ಥಿಕ ಪದ್ಧತಿಯ ಜೊತೆಗೆ ಅವರ ಸಾಂಪ್ರದಾಯಿಕ ನಂಬಿಕೆಗಳು, ಆಚರಣೆಗಳು, ವಿಧಿ ನಿಷೇಧಗಳು, ಜೀವನಾವರ್ತನ ಆಚರಣೆ ಮುಂತಾದವುಗಳನ್ನು ಅಧ್ಯಯನ ಮಾಡಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕದ ಪ್ರಮುಖ ಸಮುದಾಯಗಳಲ್ಲಿ ಒಂದಾದ ಛಲವಾದಿ ಸಮುದಾಯದ ಸಬಲೀಕರಣ ಕುರಿತು ಅಧ್ಯಯನ ಮಾಡಲಾಗಿದೆ. ಈ ಅಧ್ಯಯನಕ್ಕೆ ಬಳ್ಳಾರಿ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.*

**Keywords:** *ಸಮುದಾಯ ಅಧ್ಯಯನ, ಛಲವಾದಿ ಸಮುದಾಯ, ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ, ಬಳ್ಳಾರಿ ಜಿಲ್ಲೆ.*

## ಪೀಠಿಕೆ

ಭಾರತ ದೇಶವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಬೃಹತ್ ಪ್ರಜಾಪ್ರಭುತ್ವ ಜಾತ್ಯತೀತ ರಾಷ್ಟ್ರವಾಗಿದೆ. ಇಲ್ಲಿ ಹಲವಾರು ಧರ್ಮದವರು ಸಹಬಾಳ್ವೆಯಿಂದ ಜೀವನ ನಡೆಸುತ್ತಿದ್ದಾರೆ. ಈ ನಡುವೆ ಸಾವಿರಾರು ವರ್ಷಗಳಿಂದ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿರುವ ಅಸ್ಪೃಶ್ಯ ಸಮುದಾಯಗಳು ಕೂಡ ನೆಲೆಸಿವೆ. ಭಾರತದ ಪ್ರಮುಖ ಧರ್ಮ ಹಿಂದೂ. ಹಿಂದೂ ಧರ್ಮದಲ್ಲಿ ಜಾತಿ ಪದ್ಧತಿ ಎನ್ನುವುದು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಭಾರತೀಯ ಸಮಾಜದಲ್ಲಿ ಚಾತುರ್ವರ್ಣ ಪದ್ಧತಿಯಿದ್ದು, ತಲೆಯಿಂದ ಬ್ರಾಹ್ಮಣ, ತೋಳಿನಿಂದ ಕ್ಷತ್ರಿಯ, ತೊಡೆಯಿಂದ ವೈಶ್ಯ ಹಾಗೂ ಪಾದದಿಂದ ಶೂದ್ರ ಜನಿಸಿದನು ಎಂಬುದಾಗಿ ಮನುಸ್ಮೃತಿಯಲ್ಲಿ ಉಲ್ಲೇಖವಿದೆ. ನಾಲ್ಕನೇ ವರ್ಣದಲ್ಲಿ ಬರುವ ಶೂದ್ರರು ಮೇಲಿನ ಎಲ್ಲಾ ಮೂರು ವರ್ಣದವರಿಗೂ ಸೇವಕರಾಗಿ ಸೇವೆ ಸಲ್ಲಿಸಬೇಕಿತ್ತು. ಶೂದ್ರ ವರ್ಣದಲ್ಲಿ ವೃತ್ತಿಗನುಗುಣವಾಗಿ ಸಾವಿರಾರು ಜಾತಿಗಳಿವೆ. ಇವರು ಬ್ರಾಹ್ಮಣ, ಕ್ಷತ್ರಿಯ ಮತ್ತು

***Please cite this article as:*** ಮಹೇಶ್ವರಿ ಸಿ. ಎಂ ಮತ್ತು ಚಲುವರಾಜು. (2024). ಛಲವಾದಿ ಸಮುದಾಯದ ಸಬಲೀಕರಣ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ). *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(1), 118–122.

ವೈಶ್ಯರಿಗೆ ಸೇವೆಸಲ್ಲಿಸುತ್ತ ಕೆಳಸ್ಥರದಲ್ಲಿ ಹೀನಾಯವಾಗಿ ಜೀವನ ದೂಡಬೇಕಿತ್ತು. ಇವರಿಗಿಂತಲೂ ಕೊನೆಯ ಸ್ಥಾನದಲ್ಲಿದ್ದ ಅಸ್ಪಶ್ಯ ಸಮುದಾಯಗಳ ಬದುಕು ಇನ್ನೂ ಕಷ್ಟಕರವಾಗಿತ್ತು. ಅಂತಹ ಅಸ್ಪೃಶ್ಯ ಸಮುದಾಯಗಳಲ್ಲಿ ಛಲವಾದಿ ಸಮುದಾಯ ಕೂಡ ಒಂದಾಗಿದೆ.

**ಸಬಲೀಕರಣ ಅರ್ಥ**

ಜನರಲ್ಲಿ ಬೌದ್ಧಿಕ ರಾಜಕೀಯ ಸಾಮಾಜಿಕ ಆರ್ಥಿಕ ಬಲವನ್ನು ಹೆಚ್ಚಿಸುವುದಕ್ಕೆ ಸಬಲೀಕರಣ ಅಥವಾ ಸಶಕ್ತತೆ ಎನ್ನುತ್ತಾರೆ. ಸಬಲೀಕರಣ ಎನ್ನುವುದು ಸಾಮಾನ್ಯವಾಗಿ ಜನರಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವುದರ ಜೊತೆಗೆ ಅವರ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಸಬಲೀಕರಣವು ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದುವುದರ ಜೊತೆಗೆ ಮಾಹಿತಿ ಮತ್ತು ಸಂಪನ್ಮೂಲಗಳ ಬಗ್ಗೆ ತಿಳಿದುಕೊಳ್ಳುವ ಹಾಗೂ ಅವುಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದುವುದಾಗಿರುತ್ತದೆ. ಇದಲ್ಲದೆ ಅವರ ಇಚ್ಛೆಗೆ ಅನುಸಾರವಾಗಿ ಆಯ್ಕೆ ಮಾಡುವ ಅವಕಾಶಗಳನ್ನು ಹೊಂದುವುದು, ಒಟ್ಟಿಗೇ ಅಥವಾ ಗುಂಪು ನಿರ್ಣಯ ತೆಗೆದುಕೊಳ್ಳುವುದರಲ್ಲಿ ವಿಶ್ವಾಸದಿಂದ ಧೃಡಪಡಿಸುವ ಸಾಮರ್ಥ್ಯವನ್ನು ಹೊಂದುವುದು, ಬದಲಾವಣೆಯನ್ನು ಮಾಡುವುದರಲ್ಲಿ ಧನಾತ್ಮಕ ಭಾವನೆಯನ್ನು ಹೊಂದುವುದು, ಸ್ವಯಂ ಮತ್ತು ಗುಂಪು ಪ್ರಾಬಲ್ಯವನ್ನು ಹೆಚ್ಚಿಸಲು ವಿವಿಧ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವುದು, ಪ್ರಜಾ ಪ್ರಭುತ್ವದ ಮಾರ್ಗದಲ್ಲಿ ಇತರರ ಗ್ರಹಿಕೆ ಶಕ್ತಿಯನ್ನು ಬದಲಾಯಿಸುವಂತೆ ಮಾಡುವುದು, ಸ್ವಯಂ ಪ್ರೇರೇಪಿತರಾಗಿ ನಿರಂತರ ಬದಲಾವಣೆಯ ಬೆಳವಣಿಗೆ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಹಾಗೂ ಆತ್ಮಾಭಿಮಾನ ಹೆಚ್ಚು ಮಾಡುವುದರಲ್ಲಿ ಹಾಗೂ ಕಳಂಕದಿಂದ ಪಾರಾಗುವುದರಲ್ಲಿ ತೊಡಗಿಕೊಳ್ಳುವುದು ಸಬಲೀಕರಣದ ವ್ಯಾಪ್ತಿಗೆ ಬರುತ್ತದೆ.

ವ್ಯಕ್ತಿಗಳು, ಗುಂಪುಗಳು ಅಥವಾ ಸಮುದಾಯಗಳು ಯಾವುದೇ ಪರಿಸ್ಥಿತಿ ಅಥವಾ ಸಂದರ್ಭದ ಮೇಲೆ ಹಿಡಿತ ಸಾಧಿಸುವ ಸಾಮರ್ಥ್ಯವನ್ನು ಹೊಂದುವುದು ಎಂಬುದಾಗಿ ರಾಬರ್ಟ್ ಆಡಮ್ಸ್ ಅಭಿಪ್ರಾಯ ಪಟ್ಟಿದ್ದಾರೆ. ರಾಪ್ಪಾ ಪೋರ್ಟ್‌ನ್ (1984) ಸಬಲೀಕರಣವನ್ನು ಒಂದು ಪ್ರಕ್ರಿಯೆಯಾಗಿ ನೋಡಲಾಗುತ್ತದೆ. ಜನರು, ಸಂಸ್ಥೆಗಳು ಮತ್ತು ಸಮುದಾಯಗಳು ತಮ್ಮ ಜೀವನದ ಮೇಲೆ ಪಾಂಡಿತ್ಯವನ್ನು ಪಡೆಯುವ ಕಾರ್ಯ ವಿಧಾನ ಎಂಬುದಾಗಿ ಹೇಳಿದ್ದಾರೆ.

**ಅಧ್ಯಯನದ ಉದ್ದೇಶಗಳು**

1. ಛಲವಾದಿ ಸಮುದಾಯದ ಸಂಸ್ಕೃತಿ ಅನನ್ಯತೆಯನ್ನು ಅರ್ಥೈಸುವುದು.
2. ಛಲವಾದಿ ಸಮುದಾಯದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಸಬಲೀಕರಣವನ್ನು ಸಾಧಿಸಲು ಇರುವ ಸಮಸ್ಯೆಗಳನ್ನು ಗುರುತಿಸುವುದು.
3. ಛಲವಾದಿ ಸಮುದಾಯದ ಸಬಲೀಕರಣದಲ್ಲಿ ಸರ್ಕಾರಿ ಯೋಜನೆಗಳನ್ನು ಕುರಿತು ಚರ್ಚಿಸುವುದು.

**ಅಧ್ಯಯನ ವ್ಯಾಪ್ತಿ**

ಒಂದು ಅಧ್ಯಯನವನ್ನು ಪರಿಪೂರ್ಣವಾಗಿ, ಸ್ಪಷ್ಟವಾಗಿ ಮತ್ತು ವಸ್ತುನಿಷ್ಠವಾಗಿ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸಂಶೋಧನಾ ಕಾರ್ಯ ನಿರ್ವಹಿಸಬೇಕಾದರೆ ಅಧ್ಯಯನಕ್ಕೊಂದು ನಿರ್ದಿಷ್ಟವಾದ ವ್ಯಾಪ್ತಿ ಅವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ, ಕೊಟ್ಟೂರು, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಸಿರಗುಪ್ಪ, ಕಂಪ್ಲಿ, ಹೊಸಪೇಟೆ, ಕುರಗೋಡು ತಾಲೂಕುಗಳನ್ನು ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

**ಅಧ್ಯಯನದ ಮಹತ್ವ**

ಛಲವಾದಿ ಸಮುದಾಯ ಸಬಲೀಕರಣ ಕುರಿತಾದ ಈ ಅಧ್ಯಯನದಿಂದ ಛಲವಾದಿ ಸಮುದಾಯದ

ಅನನ್ಯತೆ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಸ್ಥಿತಿಗತಿಯ ಬಗ್ಗೆ ತಿಳಿದುಕೊಳ್ಳಬಹುದಾಗಿದೆ. ಹಾಗೂ ಛಲವಾದಿ ಸಮುದಾಯದ ಸಬಲೀಕರಣಕ್ಕೆ ಪೂರಕವಾಗಿರುವ ಯೋಜನೆಗಳನ್ನು ರೂಪಿಸಲು ಅನುಕೂಲವಾಗುತ್ತದೆ.

**ಅಧ್ಯಯನದ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ ವಿಧಾನ, ಸಹಭಾಗಿತ್ವ ಅವಲೋಕನ ವಿಧಾನ, ಚಾರಿತ್ರಿಕ ವಿಧಾನ, ವ್ಯಕ್ತಿ ಅಧ್ಯಯನ ವಿಧಾನ, ಗುಂಪು ಚರ್ಚೆ ಮುಂತಾದ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ಗ್ರಂಥಗಳು, ವರದಿಗಳು, ಲೇಖನಗಳು, ಅಂತರ್ಜಾಲ ಮುಂತಾದ ಮೂಲಗಳಿಂದ ಸಂಗ್ರಹಿಸಿಕೊಳ್ಳಲಾಗಿದೆ.

**ವಿಷಯ ಮಂಡನೆ**

ಛಲವಾದಿ ಸಮುದಾಯವು ಕರ್ನಾಟಕದ ಪ್ರಮುಖ ದಲಿತ ಸಮುದಾಯಗಳಲ್ಲಿ ಒಂದಾಗಿದೆ. ಛಲವಾದಿಗಳು ಹಿಂದೆ ಹೊಲದೊಡೆಯರಾಗಿದ್ದರು ಈ ಹಿನ್ನೆಲೆಯಲ್ಲಿ ಈ ಸಮುದಾಯಕ್ಕೆ ಹೊಲೆಯ ಎಂಬ ಹೆಸರು ಬಂದಿದೆ. ಛಲವಾದಿ ಸಮುದಾಯವನ್ನು ಚಲವಾದಿ, ಬಲಗೈ, ಹೊಲೆಯ, ಹೊಲೆಯಾರ್, ಹೊಲೆಯರು, ಆದಿ ದ್ರಾವಿಡ, ಆದಿ ಕರ್ನಾಟಕ ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತದೆ. ಇವರನ್ನು ತೆಲುಗಿನ ಮಾಲರು, ತಮಿಳಿನಿ ಪರಿಯನ್ ಸಮುದಾಯಗಳ ಜೊತಗೆ ಹೋಲಿಸಬಹುದಾಗಿದೆ. ಕನ್ನಡದಲ್ಲಿ ಹೊಲೆಯ ಎಂಬುದು ಜಾತಿ ಸೂಚಕವಾಗಿ ಬಳಸಲ್ಪಟ್ಟಿದೆ. ಬಳ್ಳಾರಿ ಜಿಲ್ಲೆಯಲ್ಲಿ ಹೊಲೆಯ, ಹೊಲೆಯರು, ಛಲವಾದಿ, ಚನ್ನ ಹೊಲೆಯರು, ಚನ್ನಯ್ಯ, ಹರಿಜನ ಎಂದು ಕರೆಯುತ್ತಾರೆ ಹೈದಾರಬಾದ್ ಕರ್ನಾಟಕದಲ್ಲಿ ಬೇಗಾರು ಆದಿ ದ್ರಾವಿಡ ಎಂದು ಕರೆಯುತ್ತಾರೆ ಮತ್ತು ಮಹಾರಾಷ್ಟ್ರದಲ್ಲಿ ಮಹಾರ್ ಎಂದು ಕರೆಯುತ್ತಾರೆ.

ಹೊಲ, ಭೂಮಿ ಎಂಬುದರ ದ್ಯೋತಕವಾಗಿ ಹೊಲೆಯ ಪದದ ಅರ್ಥವಿದೆ. ಮೊದಲು ಬೇಸಾಯ ಮಾಡಿದವರೆ ಹೊಲೆಯರು ಎಂಬುದನ್ನು 'ದಿ ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ' ಕೃತಿಯಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಪ್ರಾಚೀನ ಕಾಲದಲ್ಲಿ ಬೇಸಾಯ ವೃತ್ತಿಯನ್ನು ಮಾಡಿಕೊಂಡು ಹಗಲು–ರಾತ್ರಿ ದುಡಿಯುತ್ತಿದ್ದ ಹೊಲದ ಕೆಲಸಗಾರರನ್ನು ಹೊಲದ ಆಳುಗಳು ಎಂದು, ನಂತರದಲ್ಲಿ ಹೊಲೆಯರು (ಛಲವಾದಿ) ಎಂದು ಕರೆಯಲಾಯಿತು ಎಂದಿದ್ದಾರೆ.

ಕನ್ನಡ ಭಾಷಿಕರಾಗಿರುವ ಇವರು ಪರಿಶಿಷ್ಟ ಜಾತಿಯಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಸಮುದಾಯವಾಗಿದೆ. ಇವರ ಮೂಲವೃತ್ತಿ ಕೃಷಿ ಮತ್ತು ಕೃಷಿ ಕೂಲಿಯಾಗಿದೆ. ಸ್ವಾತಂತ್ರ್ಯ ಪೂರ್ವದಿಂದಲೂ ಮೇಲ್ವರ್ಗದವರು ಇವರನ್ನು ಜೀತ ಕಾರ್ಮಿಕರಾಗಿ ದುಡಿಸಿಕೊಂಡಿದ್ದಾರೆ. ಸ್ವಾತಂತ್ರ್ಯ ಬಂದ ನಂತರ ಸಂವಿಧಾನಬದ್ಧವಾಗಿ ಇವರಿಗೆ ಸಮಾನ ಪ್ರಾತಿನಿಧ್ಯತೆಯನ್ನು ನೀಡಬೇಕೆಂಬ ಉದ್ದೇಶದಿಂದ ಮೀಸಲಾತಿ ಸೌಲಭ್ಯವನ್ನು ನೀಡಿ ವಿವಿಧ ರೀತಿಯ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಬಲೀಕರಣಕ್ಕಾಗಿ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಇದರಿಂದಾಗಿ ಈ ಸಮುದಾಯಗಳು ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗಿದೆ. ಆದರೂ ಇವರ ಮೇಲಿನ ಶೋಷಣೆ ಇಂದಿಗೂ ನಡೆಯುತ್ತಿದೆ.

ಆಯಾಯ ಪ್ರದೇಶದಲ್ಲಿ ಮೂಲ ನಿವಾಸಿಗಳಾದ ಅಸ್ಪೃಶ್ಯರು ಶೋಷಣೆ, ದೌರ್ಜನ್ಯ ಮತ್ತು ನಿರ್ಲಕ್ಷಕ್ಕೆ ಒಳಗಾಗಿದ್ದಾರೆ. ಛಲವಾದಿ ಸಮುದಾಯದ ಜನರು ರಾಜರು, ಸಾಮಂತರು, ಭೂ ಒಡೆಯರಾಗಿ ಹಿಂದೆ ಬಾಳಿದ್ದಾರೆ. ರಾಜಪ್ರಭುತ್ವದ ಕಾಲದಿಂದಲೂ ರಾಜ ವ್ಯವಸ್ಥೆಯೊಂದಿಗಿದ್ದು ಅವರ ಸೇವೆ ಮಾಡುತ್ತ ಬದುಕಿರುವುದು ಕಂಡು ಬರುತ್ತದೆ.

ಛಲವಾದಿ ಸಮುದಾಯದಲ್ಲಿ ಹಲವಾರು ವರ್ಷಗಳಿಂದ ಶೋಷಣೆ ವಿರುದ್ಧ ಹೋರಾಟ ಮಾಡುತ್ತಾ ಬಂದರೂ ಸಹ ಇನ್ನೂ ಶೋಷಿಸುತ್ತಲೇ ಇರುವುದನ್ನು ನೋಡುತ್ತೇವೆ. ಇದಕ್ಕೆ ನನ್ನ ಪ್ರಕಾರವಾಗಿ ಹೇಳುವುದಾದರೆ ಸಬಲೀಕರಣವನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಸಬಲರನ್ನಾಗಿ ನೋಡುವುದಾಗಿದೆ. ಆದರೆ ಛಲವಾದಿ ಸಮುದಾಯದಲ್ಲಿ ಸಬಲತೆಯನ್ನು ಕಾಣುವಲ್ಲಿ ಯಾವ ಯಾವ ಕಾರಣಗಳಿಂದ ಛಲವಾದಿ ಸಮುದಾಯ ಸಬಲೀಕರಣಗೊಳ್ಳಲು ಸಾಧ್ಯವಾಗುತ್ತಿಲ್ಲ. ಮೇಲ್ವರ್ಗದ ಸಮುದಾಯಗಳು ಈ ಸಮುದಾಯವನ್ನು ಕೆಳಮಟ್ಟದ ಕೆಲಸಗಳನ್ನು ಬಲವಂತವಾಗಿ ಮಾಡಿಸುತ್ತಿದ್ದರು. ಕಾಲ ಕಳೆದಂತೆ ಬ್ರಿಟಿಷ್ ಸರ್ಕಾರದಿಂದ ಭಾರತದಲ್ಲಿ ನ್ಯಾಯಾಂಗಗಳು ಬಂದವು. ಇದರಿಂದಾಗಿ ಸಮುದಾಯಗಳ ಸ್ಥಿತಿ ಸ್ವಲ್ಪ ಸುಧಾರಿಸಿತು. ಆದರೆ ಇತ್ತೀಚಿನ ದಿನಗಳಲ್ಲಿ ದಲಿತೇತರು (ಸ್ಪೃಶ್ಯ ಸಮುದಾಯಗಳು) ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವುದು ನಿಜವಾದ ಅಸ್ಪೃಶ್ಯರ ಹಕ್ಕುಗಳನ್ನು ಕಸಿದುಕೊಳ್ಳುತ್ತಿವೆ. ಮತ್ತೊಂದು ಕಡೆ ವಿದ್ಯಾವಂತರು ತಾವು ಹುಟ್ಟಿ ಬೆಳೆದ ಸಮುದಾಯದ ಸದಸ್ಯರಿಂದ ದೂರ ಸರಿಯುತ್ತಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಸ್ಪೃಶ್ಯ ಸಮುದಾಯಗಳ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದ್ದರೂ ಕೂಡ ಪೂರ್ಣ ಪ್ರಮಾಣದದಲ್ಲಿ ಈ ಸಮುದಾಯಗಳ ಅಭಿವೃದ್ಧಿ ಸಾಧ್ಯವಾಗಿಲ್ಲ. ಪುರಾತನ ವರ್ಣಾಶ್ರಮ ಪದ್ಧತಿ ಬೇರೆ ಸ್ವರೂಪದಲ್ಲಿ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡು ಬಂದಿದೆ. ಆಧುನಿಕ ವರ್ಣಾಶ್ರಮ ವ್ಯವಸ್ಥೆಯು ಹೊರಗೆ ಜಾತ್ಯತೀತ ಲೌಕಿಕ ಸ್ವರೂಪದ್ದೇ ಆಗಿರುತ್ತದೆ. ಆದರೆ ಆಂತರ್ಯದಲ್ಲಿ ಮಾತ್ರ ಸನಾತನ ಜಾತಿ ವ್ಯವಸ್ಥೆಯ ಪ್ರತಿರೂಪವಾಗಿರುತ್ತದೆ. ಜಾಗತೀಕರಣದ ಹೆಸರಿನಲ್ಲಿ ಅಂಬಾನಿ ಅದಾನಿ ಬಿರ್ಲಾ ಸಾದರಪಡಿಸಿದ ಶೈಕ್ಷಣಿಕ ಸುಧಾರಣೆಯ ಪ್ರಸ್ತಾವನೆಗಳ ಮೂಲಕ ಅಸಂಖ್ಯಾತ ದಲಿತರನ್ನು ಶಿಕ್ಷಣ ಕ್ಷೇತ್ರದಿಂದ ಹೊರದೂಡುವ ಸಂಚು ನಡೆದಿರುವುದನ್ನು ನೋಡುತ್ತಿದ್ದೇವೆ. ಪ್ರತಿಭಾವಂತ ದಲಿತರನ್ನು ಉನ್ನತ ಶಿಕ್ಷಣದ ಅವಕಾಶಗಳಿಂದ ವಂಚಿತರನ್ನಾಗಿ ಮಾಡುವ ಮೂಲಕ ಮನಸ್ಮೃತಿಯನ್ನು ಮತ್ತೊಮ್ಮೆ ಆಚರಣೆಗೆ ತರುವ ಹುನ್ನಾರ ಕಂಡುಬರುತ್ತಿದೆ.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ದಲಿತರ ಮೇಲಿನ ಎಲ್ಲ ವಿಧದ ದೌರ್ಜನ್ಯ, ದಬ್ಬಾಳಿಕೆಗಳ ಅಂಕಿ–ಸಂಖ್ಯೆಗಳು ಇದನ್ನು ನಿರ್ವಿವಾದವಾಗಿ ಸಾಬೀತು ಗೊಳಿಸುತ್ತಿವೆ. ಇವುಗಳನ್ನು ನೋಡಿದರೆ ಸಮುದಾಯದೊಳಗೆ ಈಗಿರುವ ಅಸ್ತಿತ್ವವನ್ನು ಕಳೆದುಕೊಂಡು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆಯೋ ಎಂಬ ಗೊಂದಲ ಸಮುದಾಯದ ನಡುವೆ ಕಾಣಬಹುದಾಗಿದೆ.

ಭಾರತದಲ್ಲಿ ಮೀಸಲಾತಿ ಅಸ್ತಿತ್ವದಲ್ಲಿದ್ದರೂ ಕೂಡ ಅವುಗಳ ಜಾರಿ ಸಮರ್ಪಕವಾಗುತ್ತಿಲ್ಲ. ಮೀಸಲಾತಿ ಯನ್ನು ಜಾರಿ ಮಾಡದೇ ಪರಿಶಿಷ್ಟ ಸಮುದಾಯ ಗಳನ್ನು ವಂಚಿಸಲಾಗುತ್ತಿದೆ. ಖಾಸಗೀಕರಣದಿಂದಾಗಿ ನ್ಯಾಯಯುತವಾಗಿ ಎಲ್ಲಾ ಸಮುದಾಯಗಳಿಗೂ ದೊರಕಬೇಕಾದ ಉದ್ಯೋಗವನ್ನು ಕಸಿದುಕೊಳ್ಳಲಾಗು ತ್ತಿದೆ. ಇದರಿಂದಾಗಿ ವಿದ್ಯಾವಂತರಾದರೂ ನಿರುದ್ಯೋಗಿಗಳಾಗಿ ಇರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

**ಸಮುದಾಯದ ಸಬಲೀಕರಣದ ಕಾರ್ಯತಂತ್ರಗಳು**

ಸಮುದಾಯದ ಸಬಲೀಕರಣವು ಸಮುದಾಯಗಳ ಒಳಗೊಳ್ಳುವಿಕೆ, ಭಾಗವಹಿಸುವಿಕೆ ಅಥವಾ ತೊಡಗಿಸಿಕೊಳ್ಳುವಿಕೆಗಿಂತ ಹೆಚ್ಚಾಗಿ ಇದು ಸಮುದಾಯ ಮಾಲೀಕತ್ವ, ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಯನ್ನು ಸ್ಪಷ್ಟವಾಗಿ ಗುರಿಯಾಗಿಸಿಕೊಳ್ಳುವ ಕ್ರಿಯೆಯನ್ನು ಸೂಚಿಸುತ್ತದೆ. ಸಮುದಾಯ ಸಬಲೀಕರಣವು ವಾಸ್ತವಿಕ ಗುರಿಗಳನ್ನು

ಹೊಂದಿಸಲು ಮತ್ತು ಸಮುದಾಯದ ಸಾಮರ್ಥ್ಯವನ್ನು ಪೂರೈಸುವ ವಿಶ್ವಾಸ ಮತ್ತು ಶಕ್ತಿಯನ್ನು ಅಭಿವೃದ್ಧಿಪಡಿಸುವುದನ್ನು ಒಳಗೊಂಡಿರುತ್ತದೆ. ಸಕಾರಾತ್ಮಕ ಆಯ್ಕೆಗಳನ್ನು ನಿಗದಿಪಡಿಸುವ ಮೂಲಕ ಜೀವನದ ಮೇಲೆ ಹಿಡಿತ ಸಾಧಿಸುವುದು.

ಸಬಲೀಕರಣವು ಜನರಲ್ಲಿ ಮತ್ತು ಸಮುದಾಯಗಳಲ್ಲಿ ಸ್ವಾಯತ್ತತೆ ಮತ್ತು ಸ್ವ-ನಿರ್ಣಯದ ಮಟ್ಟವನ್ನು ಹೆಚ್ಚಿಸಲು ವಿನ್ಯಾಸಗೊಳಿಸಲಾದ ಕ್ರಮಗಳನ್ನು ಸೂಚಿಸುತ್ತದೆ ಮತ್ತು ಸಮುದಾಯ ಹಿತಾಶಕ್ತಿಗಳನ್ನು ಜವಾಬ್ದಾರಿಯುತ ಮತ್ತು ಸ್ವ-ನಿರ್ಣಯದ ರೀತಿಯಲ್ಲಿ ಪ್ರತಿನಿಧಿಸಲು ಅನುವು ಮಾಡಿಕೊಡುತ್ತದೆ. ತನ್ನದೆ ಅಧಿಕಾರವನ್ನು ನಿರ್ವಹಿಸುತ್ತದೆ. ಛಲವಾದಿ ಸಮುದಾಯವನ್ನು ಸಬಲೀಕರಣಗೊಳಿಸಲು ಹಲವಾರು ಕಾರ್ಯತಂತ್ರಗಳನ್ನು ರೂಪಿಸಬಹುದಾಗಿದೆ. ಅವುಗಳೆಂದರೆ (1) ಛಲವಾದಿ ಸಮುದಾಯದ ಜನರಿಗೆ ತಮ್ಮದೇ ಆದ ಲಾಭೋದ್ದೇಶವಿಲ್ಲದ ಸಂಘಟನೆಯನ್ನು ರಚಿಸಲು ಸಹಾಯ ಮಾಡುವುದು. (2) ಸಮುದಾಯ ಸಬಲೀಕರಣಕ್ಕೆ ಅಗತ್ಯವಾದ ಜ್ಞಾನವನ್ನು ತಿಳಿದುಕೊಳ್ಳುವುದು. (3) ಸಮಾಜಕಾರ್ಯದಲ್ಲಿ ಸಬಲೀಕರಣವು ಸಾಮಾಜಿಕ ಕಾರ್ಯಕರ್ತರಿಗೆ ತಮ್ಮ ಗ್ರಾಹಕರ ಸ್ವ-ಸಹಾಯದ ಸಾಮರ್ಥ್ಯವನ್ನು ಹೆಚ್ಚಿಸಲು ಅನುವು ಮಾಡಿಕೊಡುವುದು.

**ಪರಾಮರ್ಶನ ಗ್ರಂಥಗಳು**


- ಎಡ್ಗರ್ ಥರ್ಸ್ಟನ್. (1909). *ದಿ ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ.* ಗೌವರ್ನಮೆಂಟ್ ಪ್ರೆಸ್.
- ಚಲುವರಾಜು. (2005). ದಕ್ಕಲಿಗರ ಸಂಸ್ಕೃತಿ. ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಚಿನ್ನಸ್ವಾಮಿ ಸೋಸಲೆ, ಎನ್. (2012). *ದಲಿತರ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು.* ಯಾಜಿ ಪ್ರಕಾಶನ.
- ಗೊಳಸಂಗಿ ಸಿ.ಎನ್. (2008). *ಬಿಜಾಪುರ ಜಿಲ್ಲೆಯ ಹೊಲೆಯರು : ಸಾಂಸ್ಕೃತಿಕ ಅಧ್ಯಯನ.* ಕರ್ನಾಟಕ ವಿಶ್ವವಿದ್ಯಾಲಯ.
- ಹಿರೇಮಠ, ಎಸ್.ಎಸ್. (1993). *ಕರ್ನಾಟಕ ದಲಿತ ಸಂಸ್ಕೃತಿಯ ಪರಂಪರೆ ಭಾಗ-3.* ಸಮತಾ ಪ್ರಕಾಶನ.
- ಹೊನ್ನುಂಗರ್ ಐ.ಎಸ್. ವಾಯ್. *ಛಲವಾದಿ ಸಮುದಾಯದ ಸಮಾಜಶಾಸ್ತ್ರೀಯ ಅಧ್ಯಯನ (ಗದಗ ಜಿಲ್ಲೆಯನ್ನು ಅನುಲಕ್ಷಿಸಿ).* ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ.
- ಕೃಷ್ಣಯ್ಯ ಎ.ಪಿ. (1993). *ಛಲವಾದಿ ಜನಾಂಗ.* ಹೇಮಂತ ಪ್ರಕಾಶನ.
- ಮಹೇಶ, ಸಿ.ಕೆ. (2006). *ದಲಿತ ಚರಿತ್ರೆ ಮತ್ತು ಬುದ್ಧ ಧರ್ಮ.* ವಿಮೋಚನಾ ಪ್ರಕಾಶನ.
- ಮೊಗಳ್ಳಿ ಗಣೇಶ. (2005). *ದಲಿತ ಚಿಂತನ.* ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ.
- ನಾಗರಾಜು. (1993). *ಕೆಂಬಟ್ಟಿ ಹೊಲೆಯರ ಸಂಸ್ಕೃತಿ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಪ್ರಭಾಕರ ಎ.ಎಸ್. (2004). *ಆದಿವಾಸಿ ಆಖ್ಯಾನ.* ಸಿದ್ಧಾರ್ಥ ಪ್ರಕಾಶನ.
- ಸಜ್ಜನಕೆರೆ ಸಿದ್ದಲಿಂಗಪ್ಪ. (2006). *ಛಲವಾದಿ ಜನಾಂಗದ ವಿಶಿಷ್ಟ ವಿವಾಹ ಪದ್ಧತಿ.*
- ಶಿಂಗೆ, ಎಸ್.ಆರ್. (1993). *ಹೊಲೆಯರು: ಒಂದು ಸಾಂಸ್ಕೃತಿಕ ಅಧ್ಯಯನ.* ಕರ್ನಾಟಕ ವಿಶ್ವವಿದ್ಯಾಲಯ.
- ಸುಭಾಷ್ ಭರಣಿ. (2007). *ಮೈಸೂರು ಜಿಲ್ಲೆಯ ಆದಿ ಕರ್ನಾಟಕ ಅಭಿವೃದ್ಧಿ: ಒಂದು ಅಧ್ಯಯನ.* ಕನ್ನಡ ವಿಶ್ವವಿದ್ಯಾಲಯ.